ಸಿ.ಸಿ .ನಂ. 120/2022 ಪಿಡಬ್ಲೂಃ 1

ದಿನಾಂಕಃ 23-06-2023 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು.

ಫಿರ್ಯಾದುದಾರರ ಪ್ರಮಾಣೀಕೃತ ಹೇಳಿಕೆಯನ್ನು ಮುಖ್ಯ ವಿಚಾರಣೆ ಎಂದು ಹಾಗೂ ಸದರಿ ಫಿರ್ಯಾದುದಾರರು ಪಿಡಬ್ಲ್ಯೂ-1 ಎಂದು ಪರಗಣಿಸಲಾಗಿದೆ .

**ಪಾಟೀ ಸವಾಲುಃ ಆರೋಪಿಯ ಪರವಾಗಿಃ ಶ್ರೀ ಆರ್ ಜಿ ಎನ್ ವಕೀಲರಿಂದಃ**

3. ಆರೋಪಿಯು ಮುಂಚೆ ನನ್ನ ಬೋಟಿನಲ್ಲಿ ಕೆಲಸ ಮಾಡುತ್ತಿದ್ದುದ್ದರಿಂದ ನನಗೆ ಅವರ ಪರಿಚಯ ಇದೆ . ಆರೋಪಿಯು ನನ್ನ ಬೋಟಿಯಲ್ಲಿ ಕೇವಲ ಒಂದು ವರ್ಷ ಮಾತ್ರ ಕೆಲಸ ಮಾಡಿರುತ್ತಾರೆ . ಈಗ ನನ್ನ ಬೋಟಿನಲ್ಲಿ ಆರೋಪಿಯು ಕೆಲಸ ಮಾಡುತ್ತಿಲ್ಲ . ನಾನು 5 ನೇ ತರಗತಿಯವರೆಗೆ ಓದಿರುತ್ತೇನೆ . ನನ್ನ ಹತ್ತಿರ ಒಂದು ಬೋಟ್ ಇದ್ದು , ಆ ಬೋಟು ಈಗಲೂ ಇದೆ , ಅದೇ ಬೋಟಿನಲ್ಲಿ ಆರೋಪಿಯು ಕೆಲಸ ಮಾಡುತ್ತಿದ್ದರು ಹಾಗೂ ಸದರಿ ಬೋಟನ್ನು ಬಂದ್ ಮಾಡಿ 4 ವರ್ಷಗಳಾಯಿತು . ನನ್ನ ಮುಖ್ಯ ವಿಚಾರಣೆಯ ಬಗ್ಗೆ ನನಗೆ ಮಾಹಿತಿ ಇದೆ . ಸುಮಾರು 4 ವರ್ಷಗಳ ಹಿಂದೆ ಆರೋಪಿಯು ಮತ್ತು ಮೂರು ಜನರು ನಮ್ಮ ಮನೆಗೆ ಬಂದಿರುತ್ತಾರೆ . ಆ ದಿವಸ ನಾನು ಆರೋಪಿ ಮತ್ತು ಅವರ ಜೊತೆಗೆ ಬಂದ ಮೂರು ಜನರನ್ನು ಗೋವಾಕ್ಕೆ ಕರೆದುಕೊಂಡು ಹೋದೆನು . ಆ ದಿವಸ ಆರೋಪಿಯು ಮತ್ತು ಇತರ ಮೂರು ಜನರು ನಮ್ಮ ಮನೆಗೆ ಬೆಳಿಗ್ಗೆ ಸುಮಾರು 8 ಗಂಟೆಗೆ ಬಂದಿದ್ದರು . ಆರೋಪಿಯು ತನ್ನ ಜೊತೆಗೆ ಬಂದಿರುವ ಮೂರು ಜನರು ತನ್ನ ಭಾವ ಹಾಗೂ ನೆಂಟರು ಎಂದು ಹೇಳಿರುತ್ತಾರೆ . ಸದರಿ ಮೂರು ಜನರ ಹೆಸರು ನನಗೆ ಈಗ ನೆನಪಿಲ್ಲ . ನನಗೆ ಆರೋಪಿಯನ್ನು ಬಿಟ್ಟು ಅವರೊಂದಿಗೆ ಬಂದಿರುವ ಸದರಿ ಮೂರು ಜನರ ಪರಿಚಯ ಇಲ್ಲ .

4. ರೀನಾ ರೊಡ್ರಿಗಸ್ ಹಾಗೂ ಡೊಮಿಂಗೊ ರೊಡ್ರಿಗಸ್ ರವರಿಗೆ ಗೋವಾದಲ್ಲಿ ಎರಡು ಮೀನುಗಾರಿಕಾ ಬೋಟುಗಳು ಇವೆ . ಆರೋಪಿಗೆ ನಾನು ಕೊಟ್ಟಿದ್ದೆನು ಎಂದು ಹೇಳಿದ ಹಣವನ್ನು ನಾನು

ಗೋವಾದಲ್ಲಿ ಕೊಟ್ಟಿರುತ್ತೇನೆ . ನಾನು ಆರೋಪಿಗೆ ಕೊಟ್ಟಿರುವ ಹಣವನ್ನು ಮೇಲೆ ಹೇಳಿದ ರೀನಾ ರೊಡ್ರಿಗಸ್ ರವರಿಂದ ತೆಗೆದುಕೊಂಡಿರುತ್ತೇನೆ . ಸದರಿ ಹಣವನ್ನು ರೀನಾ ರೊಡ್ರಿಗಸ್ ರವರು ನನಗೆ ನಗದು ರುಪಾದಲ್ಲಿ ಕೊಟ್ಟಿರುತ್ತಾರೆ . ಆ ರೀತಿ ರೀನಾ ರೊಡ್ರಿಗಸ್ ರವರು ನನಗೆ ಹಣವನ್ನು ಕೊಡುವಾಗ ಆರೋಪಿ ಮತ್ತು ಅವರ ಜೊತೆಯಲ್ಲಿ ಇದ್ದ ಮೂರು ಜನರು ಇದ್ದರು . ಆ ಸಂದರ್ಭದಲ್ಲಿ ನಾನು ಆರೋಪಿಯ ಹತ್ತಿರ ಚೆಕ್ ನ್ನು ತೆಗೆದುಕೊಂಡಿರುತ್ತೇನೆ ಎಂದರೆ ಸರಿ . ಆ ಸಂದರ್ಭದಲ್ಲಿ ನಾನು ಆರೋಪಿಯ ಹತ್ತಿರ ಖಾಲಿ ಚೆಕ್ ನ್ನು ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ .

5. ಹಣಕೊಟ್ಟ ಬಗ್ಗೆ ಮಾಡಿಕೊಂಡಿರುವ ಕರಾರು ಪತ್ರದ ಜರೆಕ್ಸ ಪ್ರತಿಯನ್ನು ನಾನು ಹಾಜರು ಪಡಿಸಿರುತ್ತೇನೆ . ಈ ಕೇಸಿನಲ್ಲಿ ನಿಶಾನೆಯಾಗಿ ಗುರುತಿಸಿರುವ ದಾಖಲೆಗಳನ್ನು ಸಾಕ್ಷಿಯು ಪರಿಶೀಲನೆ ಮಾಡಿ ಅದರಲ್ಲಿ ಸದರಿ ಕರಾರು ಪತ್ರ ಇಲ್ಲ ಎಂದು ನುಡಿಯುತ್ತಾರೆ . ಸದರಿ ಕರಾರು ಪತ್ರ ಗೋವಾದಲ್ಲಿ ಆಗಿರುತ್ತದೆ . ಸದರಿ ಕರಾರು ಪತ್ರವನ್ನು ಛಾಪಾ ಕಾಗದದಲ್ಲಿ ಮಾಡಿರುತ್ತೇವೆ . ಸದರಿ ಕರಾರು ಪತ್ರ ಆಂಗ್ಲ ಭಾಷೆಯಲ್ಲಿ ಇತ್ತು . ಸದರಿ ಕರಾರು ಪತ್ರವನ್ನು ಗೋವಾದ ರಾಜ್ಯದ ಬೋಟ್ ಮಾಲೀಕರು ಎಂದರೆ ಸರಿ . ಆರೋಪಿಯ ಎಷ್ಟರವರೆಗೆ ಕಲಿತಿರುತ್ತಾರೆ ಎಂದು ನನಗೆ ಗೊತ್ತಿಲ್ಲ . ಆರೋಪಿಗೆ ಆಂಗ್ಲ ಭಾಷೆ ಬರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ . ನನಗೆ ಇಂಗ್ಲೀಷ ಭಾಷೆ ಬರುವುದಿಲ್ಲ . ಸದರಿ ಕರಾರು ಪತ್ರಕ್ಕೆ ಆರೋಪಿ ಹಾಗೂ ಅವರ ಜೊತೆ ಇದ್ದ ಮೇಲೆ ಹೇಳಿದ ಮೂರು ಜನರು ಸಹಿ ಮಾಡಿರುತ್ತಾರೆ . ಆರೋಪಿ ಮತ್ತು ಸದರಿ ಮೂರು ಜನರು ತಲಾ ಎರಡು ಲಕ್ಷ ರೂಪಾಯಿ ಚೆಕ್ ನ್ನು ಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ಆರೋಪಿಯು ಮಾತ್ರ ಚೆಕ್ ನ್ನು ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ . ಆರೋಪಿಯು ಸಿಂಡಿಕೇಟ್ ಬ್ಯಾಂಕಿನ ಚೆಕ್ ನ್ನು ಕೊಟ್ಟಿರುತ್ತಾರೆ . ಸದರಿ ಚೆಕ್ ಗೋಕರ್ಣ ಶಾಖೆಯ ಚೆಕ್ ಆಗಿರಬೇಕು . ಸದರಿ ಚೆಕ್ ನಲ್ಲಿ ಆರೋಪಿಯು 8 ಲಕ್ಷ ರೂಪಾಯಿ ಎಂದು ಬರೆದುಕೊಟ್ಟಿರುತ್ತಾರೆ . ನಾನು ಆರೋಪಿಗೆ 8 ಲಕ್ಷ ರೂಪಾಯಿ ಕೊಟ್ಟಿರುವುದರಿಂದ ಆರೋಪಿಯು ನನಗೆ 8 ಲಕ್ಷ ರೂಪಾಯಿಗೆ ಚೆಕ್ ನ್ನು ಕೊಟ್ಟಿರುತ್ತಾರೆ . ಆರೋಪಿಯು ಉಳಿದ ಮೂರು ಜನರ ಜೊತೆಯಲ್ಲಿ ಒಬ್ಬ ಕೆಲಸಗಾರರು ಎಂದರೆ ಸರಿ

ಪಿಡಬ್ಲೂಃ 1

. ಉಳಿದ ಮೂರು ಜನರ ಹತ್ತಿರ ಚೆಕ್ ನ್ನು ತೆಗೆದುಕೊಳ್ಳಲು ತೊಂದರೆ ಇತ್ತಾ ಎಂದರೆ ಸಾಕ್ಷಿಯು ತನಗೆ ಆರೋಪಿಯ ಪರಿಚಯ ಮಾತ್ರ ಇತ್ತು , ಉಳಿದ ಮೂರು ಜನರ ಪರಿಚಯ ಇರಲಿಲ್ಲ ಎಂದು ನುಡಿಯುತ್ತಾರೆ . ಆರೋಪಿಯು 8 ಲಕ್ಷ ರೂಪಾಯಿಯ ಚೆಕ್ ನ್ನು ಕೊಟ್ಟಿರುವ ಬಗ್ಗೆ ಕರಾರಿನಲ್ಲಿ ಬರೆದಿರುತ್ತೇವೆ . ಆರೋಪಿಯು ಕೆಲಸಕ್ಕೆ ಸೇರಬೇಕಾದರೆ ನಮ್ಮ ಹತ್ತಿರ ಹಣವನ್ನು ತೆಗೆದುಕೊಂಡು ಚೆಕ್ ನ್ನು ಬರೆದುಕೊಟ್ಟಿರುತ್ತಾರೆ ಎಂದರೆ ಸರಿ .

6. ಆರೋಪಿಯು ಯಾವ ದಿನಾಂಕದಂದು ನನ್ನ ಹತ್ತಿರ ಕೆಲಸಕ್ಕೆ ಸೇರಿಕೊಂಡರು ಎಂದು ನನಗೆ ನೆನಪಿಲ್ಲ . ಆರೋಪಿಯು ಚೆಕ್ ನ್ನು ಕೊಡುವ ಸಂದರ್ಭದಲ್ಲಿ ನನ್ನ ಹತ್ತಿರ ಕೆಲಸ ಮಾಡುತ್ತಿರಲಿಲ್ಲ ಎಂದರೆ ಸರಿ . ಸಾಕ್ಷಿಯು ಮುಂದುವರೆದು ಹೇಳುತ್ತಾರೆ ಆ ಸಂದರ್ಭದಲ್ಲಿ ಆರೋಪಿಯು ಗೋವಾದಲ್ಲಿ ಕೆಲಸ ಮಾಡುತ್ತಿದ್ದರು ಎಂದು . ಸದರಿ ಕರಾರು ಪತ್ರದ ಮೂಲ ಪ್ರತಿ ಗೋವಾದಲ್ಲಿರುವ ಮೇಲೆ ಹೇಳಿದ ರೀನಾ ರೊಡ್ರಿಗಸ್ ರವರ ಹತ್ತಿರ ಇದೆ . ಅವರಿಂದ ಸದರಿ ಕರಾರು ಪತ್ರವನ್ನು ಪಡೆದುಕೊಂಡು ಈ ಕೇಸಿನಲ್ಲಿ ಹಾಜರು ಪಡಿಸಬಹುದು .

(ಮುಂದುವರೆದ ಪಾಟೀ ಸವಾಲು ಕೋರಿಕೆಯ ಮೇರೆಗೆ ಮುಂದೂಡಲಾಯಿತು. )

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.